**CC 3212/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 3212/2023**

**ಸಿ ಡಬ್ಲ್ಯೂ -5**
**ಪಿ ಡಬ್ಲ್ಯೂ -7**

**ಸಾಕ್ಷಿಯ ಹೆಸರು - ಸುಮಿತ್ರಾ**
**ಗಂಡನ ಹೆಸರು - ಲೇಟ್ ಶಂಕರ**
**ವಯಸ್ಸು - 50 ವರ್ಷಗಳು**
**ಉದ್ಯೋಗ - ಮನೆಕೆಲಸ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 27-11-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ, ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ಈ ಪ್ರಕರಣ ಯಾರು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ನಮ್ಮ ಮನೆಯ ಪಕ್ಕ ಕೃಷ್ಣಪ್ಪ ರವರ ಮನೆಯಲ್ಲಿ ಚಾಸಾ -4 ರವರು ಬಾಡಿಗೆಗೆ ಇರುತ್ತಾರೆ ಅಂದರೆ ಸರಿಯಲ್ಲ. ಸದರಿಯವರ ಮನೆಗೆ ಚಾಸಾ-1 ರವರು ದಿಃ 27-05-2023 ರಂದು ಬಂದಿದ್ದರು ಅಂದರೆ ಸರಿಯಲಲ. ಸಂಜೆ 06.30 ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿ ಅಲ್ಲಿಗೆ ಬಂದು ಜಗಳ ಮಾಡಿ 07.00

ಗಂಟೆಗೆ ಹೋದ ಅಂದರೆ ಸರಿಯಲ್ಲ. ನಾನು ಚಾಸಾ -1 ರವರಿಗೆ ಕೇಳಿದಾಗ ಆಕೆ ತನ್ನ ಗಂಡ ನ್ಯಾಯಾಲಯದ ಮುಂದಿರುವ ಆರೋಪಿ ಅಲ್ಲಿಗೆ ಬಂದು ಏಕಾಏಕಿ ಜಗಳ ಮಾಡಿ ಕೈಗಳಿಂದ ಮೈ ಕೈಗೆ ಹೊಡೆದು ಗುದ್ದಿ ಎಳೆದಾಡಿ ಗೋಡೆಗೆ ಬೀಳುವಂತೆ ನೂಕಿ ಕೋರ್ಟ ನಲ್ಲಿ ನಡೆಯುತ್ತಿರುವ ಪ್ರಕರಣ ಹಿಂಪಡೆದುಕೋ ಎಂದು ಮತ್ತು ಹಿಂಪಡೆಯದಿದ್ದರೆ ಕೊಂದು ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ ಎಂದು ತಿಳಿಸಿದರು ಅಂದರೆ ಸರಿಯಲ್ಲ. ನಾನು ಈ ಬಗ್ಗೆ ದಿಃ 30-05-2023 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 9 ಎಂದು ಗುರುತಿಸಲಾಯಿತು. ನಿಪಿಃ 9 ರಂತೆ ಹೇಳಿಕೆ ನೀಡಿದ್ದರೂ ಸಹ ಇಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಕೆ ಎನ್., ವಕೀಲರಿಂದ- ಇಲ್ಲಾ .**

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.